# ದಿನಾಂಕ :-21.05.2022 (ಶನಿವಾರ) ರಂದು ವಾರ್ಡ್ ಸಂಖ್ಯೆ : 41 ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್ ಸಮಿತಿ ಸಭೆ ನಡವಳಿಗಳು

******

ಬೃಹತ್ ಬೆಂಗಳುರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 41 ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್ ಸಮಿತಿ ಸಭೆಯ ದಿನಾಂಕ;-21.05.2022 ಶನಿವಾರ 10.30 ಗಂಟೆಗೆ ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ಉಪ ವಿಭಾಗ, ಹೆಚ್.ಎಂ.ಟಿ.ಬಡಾವಣೆ ನಾಗಸಂದ್ರ ಕಛೇರಿಯಲ್ಲಿ ನಡೆದಿರುತ್ತದೆ.

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ**

| ಕ್ರ ಸಂ | ಅಧಿಕಾರಿಗಳು ಮತ್ತು ಸದಸ್ಯರ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ.ಯೋಗೇಶ್ | ನೋಡಲ್ ಅಧಿಕಾರಿ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನ ತ್ಯಾಜ್ಯ ನಿರ್ವಹಣೆ ಕೋಶ ದಾಸರಹಳ್ಳಿ ವಲಯ | ಹಾಜರಾಗಿರುತ್ತಾರೆ |
| 2 | ಶ್ರೀ.ಸ್ವಾಮಿ.ಕೆ.ಎಸ್ | ಕಾರ್ಯದರ್ಶಿ | ಸಹಾಯಕ ಅಭಿಯಂತರರು ವಾರ್ಡ್ ನಂ.41 ಪೀ.ಕೈ.ಪ್ರ | ಹಾಜರಾಗಿರುತ್ತಾರೆ |
| 3 | ಶ್ರೀ.ಜಗದೀಶ್ ಹೆಚ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.41 | ಹಾಜರಾಗಿರುತ್ತಾರೆ |
| 4 | ಶ್ರೀ.ಎನ್.ಮಹದೇವಪ್ಪ | ಸದಸ್ಯರು | ಕಂದಾಯ ಪರಿವೀಕ್ಷಕರು ವಾ.ನಂ.41 | ಹಾಜರಾಗಿರುತ್ತಾರೆ |
| 5 | ಶ್ರೀ.ಚಂದ್ರ ಎಸ್ | ಸದಸ್ಯರು | ಮಾರ್ಷಲ್ ವಾ ನಂ 41 | ಹಾಜರಾಗಿರುತ್ತಾರೆ |
| 6 | ಶ್ರೀ.ದುಶ್ಯಂತ ಎನ್ | ಸದಸ್ಯರು | ಕಿರಿಯ ಅಭಿಯಂತರರು | ಹಾಜರಾಗಿರುತ್ತಾರೆ |
| 7 | ಶ್ರೀ.ಸಂದೀಪ್ ಟಿ.ಡಿ | ಸದಸ್ಯರು | ಸಹಾಯಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ | ಹಾಜರಾಗಿರುತ್ತಾರೆ |
| 8 | ಶ್ರೀ.ಕೆ.ಎಸ್.ಸುಧಾಮಣಿ | ಸದಸ್ಯರು | ಹಿರಿಯ ಪಶುಪಾಲನೆ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 9 | ಶ್ರೀ.ಸಾಮಿಯೂಲ್ | ಸದಸ್ಯರು | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 10 | ಶ್ರೀ.ರಮೇಶ್ ಕುಮಾರ್ | ಸದಸ್ಯರು | ಆರೋಗ್ಯ ಪರಿವೀಕ್ಷಕರು ಆರೋಗ್ಯ ಇಲಾಖೆ | ಹಾಜರಾಗಿರುತ್ತಾರೆ |

**ನಡಾವಳಿಯ ವರದಿ**

ಶ್ರೀ.ಕೆ.ಎಸ್.ಸ್ವಾಮಿ, ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 41 ಹಾಗೂ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಯವರನ್ನು, ವಾರ್ಡ್ ಸಮಿತಿ ಸದಸ್ಯರನ್ನು ಸ್ವಾಗತಿಸಿದರು.

ನೊಡಲ್ ಅಧಿಕಾರಿಯವರು ವಾರ್ಡ್ ಸಂಖ್ಯೆ 41 ರ ವಾರ್ಡ್ ಸಮಿತಿ ಸಭೆಯ ಎಲ್ಲಾ ಸದಸ್ಯರನ್ನು ಪರಿಚಯಿಸಿಕೊಂಡಿರುತ್ತಾರೆ.

**ಆರೋಗ್ಯ ಇಲಾಖೆ :**

ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಶ್ರೀ.ಜಗದೀಶ್ ಹೆಚ್ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ದಿನಾಂಕ:-17.05.2022 ರಂದು ಸುರಿದ ಭಾರಿ ಮಳೆಯಿಂದಾಗಿ ಸಿದ್ಧಾರ್ಥನಗರ ಸ್ಲಂ ನಿವಾಸಿಗಳ ತೊಂದರೆಗೆ ಸ್ಪಂದಿಸಿದ್ದು ಔಷದಿ ಸಿಂಪಡಣೆ ಇತ್ಯಾದಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಭೆಗೆ ವಿವರಿಸಿರುತ್ತಾರೆ. ಸದರಿ ನಿವಾಸಿಗಳಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಕ್ರಮ ವಹಿಸಲು ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ. **ಕ್ರಮ :- ಆರೋಗ್ಯ ಇಲಾಖೆ**

ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಶ್ರೀ.ಸ್ವಾಮಿ ಕಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ 12 ಬ್ಲಾಕ್ ಸ್ಪಾಟ್‌ಗಳನ್ನು ಸ್ವಚ್ಛಗೊಳಿಸಲಾಗಿರುತ್ತದೆ ಹಾಗೂ ಸಹಾಯ 2.0 ಆ್ಯಪ್ ದೂರಗಳನ್ನು ನಿರ್ವಹಿಸಲಾಗಿರುತ್ತದೆ ಎಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಎಲ್ಲಾ ಕಾರ್ಮಿಕರಿಗೆ ಹಾಗೂ ಗುತ್ತಿಗೆದಾರರ ಕಾರ್ಮಿಕರು ಒಳಗೊಂಡಂತೆ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲು ಸೂಚಿಸಿರುತ್ತಾರೆ. **ಕ್ರಮ :- ಘನ ತ್ಯಾಜ್ಯ ನಿರ್ವಹಣೆಕೋಶ**

ಶ್ರೀ.ರಮೇಶ್ ಕುಮಾರ್ ಆರೋಗ್ಯ ಪರಿವೀಕ್ಷಕರು, ತಿಪ್ಪೇನಹಳ್ಳಿ ಆರೋಗ್ಯ ಕೇಂದ್ರ ರವರು ವಾರ್ಡ್ ನಂ.41 ರ ವ್ಯಾಪ್ತಿಯ ನಿವಾಸಿಗಳಿಗೆ ಹಾಗೂ ಗರ್ಭಿಣಿ ಸ್ತ್ರೀ ರವರುಗಳು ಚಿಕಿತ್ಸೆ ಸಲುವಾಗಿ ಆರೋಗ್ಯ ಕೇಂದ್ರಕ್ಕೆ ತೆರಳಲು ಸುಮಾರು 7 ಕಿ.ಮೀ ದೂರದ ಪ್ರದೇಶಕ್ಕೆ ತೆರಳ ಬೇಕಾಗಿದ್ದು, ವಾರ್ಡ್ ಸಂಖ್ಯೆ 41 ರ ವ್ಯಾಪ್ತಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಿಸಲು ಮನವಿ ಮಾಡಿರುತ್ತಾರೆ.

**ಕ್ರಮ :- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

ಪು.ತಿ.ನೋ

ಶ್ರೀ.ಸಂದೀಪ್.ಟಿ.ಡಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ವಾರ್ಡ್ ನಂ.41 ರ ಗೃಹಲಕ್ಷ್ಮಿ ಬಡಾವಣೆಯಯಲ್ಲಿ ಪೈಪ್ ಲೈನ್ ನಿರ್ವಹಿಸಲಾಗುತ್ತಿಯಂದು ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಶ್ರೀಘ್ರವಾಗಿ ವಾರ್ಡ್ ನಂ.41 ರ ವ್ಯಾಪ್ತಿಯಲ್ಲಿ ಪೈಪ್ ಲೈನ್ ಕಾಮಗಾರಿ ಹಾಗೂ Rstoration ಮಾಡಲು ಸೂಚಿಸಿರುತ್ತಾರೆ.

**ಕ್ರಮ :- ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ**

ಶ್ರೀಮತಿ.ಸುಧಾಮಣಿ.ಕೆ.ಎಸ್ ಹಿರಿಯ ಪಶುಪಾಲನೆ ಪರಿವೀಕ್ಷಕರು ವಾರ್ಡ್ ನಂ.41 ರ ವ್ಯಾಪ್ತಿಯ ಬೀದಿ ನಾಯಿಗಳಿಗೆ ವ್ಯಾಕ್ಸಿನೇಷನ್ ಹಾಕಲಾಗಿರುತ್ತದೆ ಎಂದು ಸಭೆಗ ತಿಳಿಸಿರುತ್ತಾರೆ. ಯಾವುದೇ , ಯಾವುದೇ ಸಮಸ್ಯೆಯಾಗದಂತೆ ಕ್ರಮ ವಹಿಸಲು ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

**ಕ್ರಮ :- ಪಶುಪಾಲನೆ ಇಲಾಖೆ**

ಶ್ರೀ.ಮಹದೇವಪ್ಪ .ಎನ್ ಕಂದಾಯ ಪರಿವೀಕ್ಷಕರು ಮಾತನಾಡಿ ದಿನಾಂಕ :17.05.2022 ರಂದು ಬಿದ್ದ ಭಾರಿ ಮಳೆಯಿಂದಾಗಿ ಸಿದ್ದಾರ್ಥನಗರ ಕಾಲೋನಿ ಪ್ರದೇಶದಲ್ಲಿ ಅಪಾರವಾದ ಹಾನಿಯಾಗಿದ್ದು ಸಂಬಂಧಟಪಟ್ಟಂತೆ ಎಲ್ಲಾ ಇಲಾಖೆಯ ಸಮನ್ವಯದೋಮದಿಗೆ ಅಲ್ಲಿ ತೊಂದರೆಗೀಡಾದ ನಿವಾಸಿಗಳಿಗೆ ತುರ್ತಾಗಿ ಮಳೆ ಹಾನಿ ಪರಿಹಾರ ಒದಗಿಸುವ ಕಾರ್ಯನಿರ್ವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿಯವರು ಸದರಿ ಮಳೆ ಹಾನಿಗೆ ಒಳಗಾದ ನಿವಾಸಿಗಳಿಗೆ ಪರಿಹಾರ ಒದಗಿಸಲು ತುರ್ತಾಗಿ ಕ್ರಮ ವಹಿಸಲು ಸೂಚಿಸಿದರೂ. **ಕ್ರಮ :- ಸಹ ಕಂದಾಯ ಅಧಿಕಾರಿ(ಪೀ.ಕೈ.ಪ್ರ)**

ಸಭೆಗೆ ಗೈರು ಹಾಜರಾಗಿರುವ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳು ಅಸಮಧಾನ ವ್ಯಕ್ತಪಡಿಸಿದ್ದು, ಮುಂದಿನ ಸಭೆಗೆ ಸಾರ್ವಜನಿಕ ಹಿತದೃಷ್ಟಿಯಿಮದ ತಪ್ಪದೆ ಹಾಜರಾಗುವಂತೆ ಸಭೆಯು ತೀರ್ಮಾನಿಸಿರುತ್ತದೆ ಗೈರು ಹಾಜರಾದ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅವರ ಇಲಾಖೆಗಳ ಮೇಲಾಧಿಕಾರಿಗಳಿಗೆ ವರದಿ ಮಾಡಲಾಗುವುದೆಂದು ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಹಾಲಿಸಿ ಸ್ವಂದಿಸಿ ಪರಿಹರಿಸಲು ಕ್ರಮ ತೆಗೆದುಕೊಮಡು ಸಂಬಂಧಪಟ್ಟ ಇಲಾಖೆಗಲು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸುಚಿಸಿರುತ್ತಾರೆ.

**ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**ನೋಡಲ್ ಅಧಿಕಾರಿ ರವರ ಆದೇಶದ ಮೇರೆಗೆ**

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 41 ಪೀಣ್ಯ ಕೈಗಾರಿಕಾ ಪ್ರದೇಶ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :-

1. ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ
4. ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ
5. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ಉಪ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ಕೋಶ(ದಾವ) ರವರ ಮಾಹಿತಿಗಾಗಿ ಸಲ್ಲಿಸಿದೆ
8. ಸಹ ಕಂದಾಯ ಅಧಿಕಾರಿ ಪೀಣ್ಯ ಕೈಗಾರಿಕಾ ಪ್ರದೇಶ ಉಪ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ
9. ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.41 ರವರ ಮಾಹಿತಿಗಾಗಿ ಅಗತ್ಯಕ್ರಮಕ್ಕಾಗಿ
10. ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಸಲ್ಲಸಿದೆ
11. ಕಛೇರಿ ಪ್ರತಿ